ಓ.ಎಸ್. ನಂ. **328/2014** ಪಿ.ಡಬ್ಲೂ-2 ಹೆಸರು - ಪವಿತ್ರ

ಸಾಕ್ಷಿಯನ್ನು ದಿನಾಂಕಃ **10/12/2021** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎಂ.ಎ.ಎಸ್. ವಕೀಲರಿಂದಃ-

ವಾದಿಗಳು ಮತ್ತು 1 ನೇ ಮತ್ತು 3 ನೇ ಪ್ರತಿವಾದಿ ಎಲ್ಲರೂ ಒಟ್ಟಿಗೆ ಇದ್ದೇವೆ. ನನಗೆ ಮದುವೆ ಯಾಗಿ 8 ವರ್ಷಗಳು ಆಗಿರುತ್ತದೆ. ನಾನು ನನ್ನ ಮದುವೆ ಆಗುವುದಕ್ಕಿಂತ ಮುಂಚೆ ನನ್ನ ತಾತನ ಮನೆಯಲ್ಲಿ ಇದ್ದೆ. 1 ನೇ ವಾದಿ ನನ್ನ ಅಕ್ಕ ಈಗ ಅವರಿಗೆ 6 ತಿಂಗಳಿನಿಂದ ಆರೋಗ್ಯ ಚೆನ್ನಾಗಿರುವುದಿಲ್ಲ. ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. 1 ನೇ ವಾದಿಗೆ ಆರೋಗ್ಯ ಚೆನ್ನಾಗಿ ಇಲ್ಲದಿರುವ ಬಗ್ಗೆ ದಾಖಲೆ ಕೊಟ್ಟಿರುವುದಿಲ್ಲ, ಅವರಿಗೆ ಏನು ಅನಾರೋಗ್ಯ ಎಂದು ನನಗೆ ತಿಳಿದಿಲ್ಲ. 1 ನೇ ವಾದಿ ಆರೋಗ್ಯವಾಗಿದ್ದರೂ ಉದ್ದೇಶ ಪೂರ್ವಕವಾಗಿ ನನ್ನನ್ನು ಸಾಕ್ಷ್ಯ ಕೊಡಲು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ 16 ಕಂಬದ ತೊಟ್ಟಿ ಮನೆ ಇದೆ. ಆ ಮನೆಯನ್ನು ದಾವಾ ಆಸ್ತಿಯಾಗಿ ಮಾಡಿರುವುದಿಲ್ಲ ಕೇವಲ ಜಮೀನುಗಳನ್ನು ಮಾತ್ರ ದಾವಾ ಆಸ್ತಿಯಾಗಿ ಮಾಡಿರುತ್ತೇವೆ. ಆ ಮನೆ ಅದೇ ಊರಿನಲ್ಲಿ ಇರುತ್ತದೆ. ಮನೆಯ ಬೆಲೆ ಹತ್ತರಿಂದ ಹದಿನೈದು ಲಕ್ಷ ಇರುತ್ತದೆ. 3 ನೇ ಪ್ರತಿವಾದಿ ನನ್ನ ಮತ್ತು ಬೇರೆ ವಾದಿಗಳ ಮದುವೆ ಮಾಡಿರುತ್ತಾರೆ. 1 ನೇ ಐಟಂ ಆಸ್ತಿಯೂ 2 ನೇ ಪ್ರತಿವಾದಿಗೆ ಭೋಗ್ಯ ಮಾತ್ರ ಹಾಕಿಕೊಟ್ಟಿದ್ದು ಅವರಿಗೆ ನನ್ನ ತಂದೆ ಮಾರಾಟ ಮಾಡಿರುವುದಿಲ್ಲ. 2 ನೇ ಪ್ರತಿವಾದಿ ಮೋಸದಿಂದ 1 ನೇ ಐಟಂ ಆಸ್ತಿಯನ್ನು ನನ್ನ ತಂದೆ ಮತ್ತು ನನ್ನ ಅಣ್ಣ 3 ನೇ ಪ್ರತಿವಾದಿಯಿಂದ ಬರೆಸಿಕೊಂಡಿರುತ್ತಾರೆ, ನನ್ನ ತಂದೆ ಕುಡಿತದ ಚಟಕ್ಕೆ ಬಲಿಯಾಗಿದ್ದರು. ಮೋಸ ಮಾಡಿರುವುದಕ್ಕೆ ನಾನು ಎಲ್ಲೂ ದೂರು ಕೊಟ್ಟಿರುವುದಿಲ್ಲ. 2 ನೇ ಐಟಂ ಆಸ್ತಿಯೂ ನನ್ನ ತಾತನ ಆಸ್ತಿ, ಈ ಆಸ್ತಿಯೂ ಕುಟುಂಬದಲ್ಲೇ ಇರುತ್ತದೆ. ಐಟಂ ನಂಬರ್ 1 ಮತ್ತು 2 ಅಕ್ಕ ಪಕ್ಕದ ಜಮೀನುಗಳು. ದಾವಾ ಆಸ್ತಿಗಳ ಮಾರುಕಟ್ಟೆಯ ಬೆಲೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳ ಸರ್ಕಾರಿ ಮೌಲ್ಯ 2,50,000/- ಇಂದ 3,00,000/- ಎಕರೆಗೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ಅಣ್ಣ ಖುದ್ದಾಗಿ 1 ನೇ ಐಟಂ ಆಸ್ತಿಯನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದರಿಂದ 1 ನೇ ಐಟಂ ಆಸ್ತಿಯಲ್ಲಿ ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಐಟಂ ಆಸ್ತಿಯನ್ನು ನನ್ನ ತಂದೆಯ ಗೃಹಕೃತ್ಯದ ಖರ್ಚುಗಳಿಗೆ ಮತ್ತು ಚಿಲ್ಲರೆ ಸಾಲ ತೀರಿಸಲು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಮತ್ತು ನನ್ನ ತಂದೆ 1 ನೇ ಪ್ರತಿವಾದಿ ಜೊತೆ ನಾವು ಚೆನ್ನಾಗಿ ಇದ್ದೇವೆ. ನನ್ನ ತಂದೆ ಮತ್ತು ನನ್ನ ಅಣ್ಣ ಶಿವಕುಮಾರ್ ರವರ ಜೊತೆ ಸೇರಿ ಈ ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. 1 ನೇ ಐಟಂ ಬಿಟ್ಟು ಉಳಿದ ಆಸ್ತಿಗಳಲ್ಲಿ ಭಾಗಂಶ ತೆಗೆದುಕೊಳ್ಳಬಹುದು ಎಂದರೆ 1 ನೇ ಐಟಂ ಆಸ್ತಿಯಲ್ಲೂ ಕೂಡ ನನಗೆ ಭಾಗಂಶ ಬೇಕಾಗಿರುತ್ತದೆ. ಈ ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ಜಾಸ್ತಿಯಾಗಿರುವುದರಿಂದ 1 ಮತ್ತು 3 ನೇ ಪ್ರತಿವಾದಿಗಳು ಈ ದಾವೆಯನ್ನು ನಮ್ಮ ಕಡೆಯಿಂದ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಹಣವನ್ನು ಕೊಟ್ಟು 1

ಮತ್ತು 3 ನೇ ಪ್ರತಿವಾದಿಯಿಂದ 1 ನೇ ಐಟಂ ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ ಮತ್ತು ಅದು ನಿಮ್ಮ ತಂದೆಯ ಗೃಹಕೃತ್ಯದ ಖರ್ಚುಗಳಿಗೆ ಹಣವನ್ನು ಪಡೆದುಕೊಂಡಿರುತ್ತಾರೆ ಆದ್ದರಿಂದ ಆ ಕ್ರಯ ಪತ್ರವೂ ಎಲ್ಲಾ ವಾದಿಗಳಿಗೆ ಬದ್ಧ ಪಡಿಸುತ್ತದೆ ಎಂದರೆ ಸರಿಯಲ್ಲ. 1 ನೇ ಐಟಂ ದಾವಾ ಆಸ್ತಿಯಲ್ಲಿ ಭೋಗ್ಯದಾರರಾಗಿ 2 ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ. 3 ನೇ ಪ್ರತಿವಾದಿ 2 ನೇ ಐಟಂ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾರೆ. ಈಗ 3 ನೇ ಪ್ರತಿವಾದಿಯ ಜೊತೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಕೊಡುತ್ತಿದ್ದೇನೆ. ನನ್ನ ತಂದೆಯನ್ನು 3 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ. ವಕೀಲರ ಮೂಲಕ 3 ನೇ ಪ್ರತಿವಾದಿ ಜೊತೆ ನೋಟಿಸ್ ಕೊಡಿಸಿರುವುದಿಲ್ಲ ನನ್ನ ಅಕ್ಕ ತಂಗಿಯರ ಜೊತೆ ನೋಟಿಸ್ ಅನ್ನು ಕೊಡಿಸಿರುತ್ತೇನೆ. ನಿಪಿ-2 ದಾಖಲೆಯನ್ನು ನನ್ನ ತಂದೆ ಅರ್ಜಿ ಹಾಕಿ ಅದರ ದೃಡೀಕೃತ ನಕಲನ್ನು ಪಡೆದು, ಅವರಿಂದ ಆ ದಾಖಲೆಗಳನ್ನು ನಾನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯ ಚೆಕ್ಕುಬಂಧಿ ಮತ್ತು ವಿಸ್ತೀರ್ಣ , ಮತ್ತು ಸರ್ವೆ ನಂಬರ್ ಗಳನ್ನು ಹೇಳಲು ನನಗೆ ಬರುವುದಿಲ್ಲ.

ಮರುವಿಚಾರಣೆ ಶ್ರೀ ಹೆಚ್.ಪಿ.ಎಸ್. ವಕೀಲರಿಂದಃ-

ನಿಪಿ-2 ಕ್ಕೆ ನನ್ನ ಅಣ್ಣ 3 ನೇ ಪ್ರತಿವಾದಿ ಸಹಿ ಮಾಡಿರುವುದಿಲ್ಲ.

ಪಾಟೀ ಸವಾಲುಃ ಶ್ರೀ. ಎಂ.ಎ.ಎಸ್. ವಕೀಲರಿಂದಃ-

ನಿಪಿ-2 ಅನ್ನು ಬರೆದುಕೊಡುವಾಗ 3 ನೇ ಪ್ರತಿವಾದಿ ನನ್ನ ಅಣ್ಣ ಅಪ್ರಪ್ತಾ ವಯಸ್ಕರಾಗಿದ್ದರು ಎಂದರೆ ಸರಿ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

ಸಹಿ/-

**1** ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು